ಮೂಲಕಾನೇ ನಿಜ ಮಾಡ್ಕೋತಾನೆ. ಅಲ್ಲೊಂದು ಜಾತ್ರೆಯ ಚಿತ್ರ ಬರುತ್ತೆ. ಗಂಡನ ಮನೆಗೆ ಕಳಿಸಿದ ಮೇಲೆ ತನ್ನ ಮಗಳನ್ನು ಮೊದಲನೇ ಸಲ ಒಬ್ಬ ತಾಯಿ ಭೇಟಿಮಾಡೋದು. ರಾಗವಾಗಿ ಸ್ಥಳೀಯ ಹಿಂದಿಯಲ್ಲಿ ಮಾತನಾಡೋ ದೃಶ್ಯ. ಎಷ್ಟು ಚೆನ್ನಾಗಿ ಹೇಳ್ತಾರೆ ಅದನ್ನ. ಅಂಥ ಒಂದು ಚಿತ್ರವೂ 'ಆವರಣ'ದಲ್ಲಿಲ್ಲ. ಇಷ್ಟಕ್ಕೂ ಅದರ ಇಡೀ ಕತೆ ನಡೆಯೋದು ವಾರಾಣಸಿಯಲ್ಲಿ.

◆ **ಯಾಕೆ ನಮ್ಮ ಮಹತ್ವದ ಲೇಖಕರಾದ ಕಾರಂತ, ತೇಜಸ್ವಿ, ಅನಂತಮೂರ್ತಿ ಕಮ್ಯುನಿಸಂ ಬಗ್ಗೆ ಆಗ್ರಹಪೂರ್ವಕ ನಿಲುವು ತಳೆದರು?**

ಗೊತ್ತಿಲ್ಲ. ನಮ್ಮಲ್ಲಿ ಮಾರ್ಕ್ಸ್‌ವಾದ ಬಂದಿದ್ದೇ ಈಚೆಗಲ್ಲವಾ? ಈ ಬಗ್ಗೆ ಪೂರ್ವಗ್ರಹ ಅನಂತಮೂರ್ತಿಯವರಿಗೂ ಇದೆ. ತೇಜಸ್ವಿಗಂತೂ ತುಂಬಾನೆ ಇದೆ. ಆದರೆ ಕಾರಂತರು ಮತ್ತು ತೇಜಸ್ವಿ ತೋರಿಸುವ ಪರಿಸರದ ಬಗೆಗಿನ ಆಸಕ್ತಿಯಲ್ಲೇನೇ ವಿರೋಧಾಭಾಸಗಳಿವೆ. ಇಬ್ಬರಿಗೂ ಪಶ್ಚಿಮದ ತಂತ್ರಜ್ಞಾನದ ಬಗ್ಗೆ ಎಲ್ಲಿಲ್ಲದ ಮೋಹ. ಆ ಮೋಹ ಮತ್ತು ಈ ಪರಿಸರದ ಆಸಕ್ತಿ ಎರಡನ್ನೂ ಹೇಗೆ ಸರಿದೂಗಿಸ್ತೀರಿ? ಯಂತ್ರದ ದಕ್ಷತೆಯ ಬಗ್ಗೆ ಕ್ಲುಪ್ತತೆಯ ಬಗ್ಗೆ, ತಕ್ಷಣ ಪರಿಣಾಮಗಳನ್ನ ತೋರಿಸುವುದರ ಬಗ್ಗೆ, ಇಬ್ಬರಿಗೂ ವ್ಯಾಮೋಹವಿದೆ. ಅವರು ಪರಿಸರದ ಬಗ್ಗೆ ತೋರಿಸುವ ಆಸಕ್ತಿಯಲ್ಲಿ ವಸಾಹತುಶಾಹಿ ಸಂಶೋಧಕನ ಕುತೂಹಲಕರ ದೃಷ್ಟಿಕೋನ ಇರಬಹುದೇ ಅನ್ನೋ ಸಂದೇಹ ನನಗಿದೆ. ಅದು ಎದುರುಗಡೆ ಇರುವ ಜೀವನ ನೋಡಲ್ಪಡುವ ವಸ್ತು. ಇದು ಅವರ ಪಾಡು ನನ್ನದೂ ಹೌದು ಎಂಬ ತಾದಾತ್ಮ್ಯದಿಂದ ಬಂದ ಬರವಣಿಗೆಯಲ್ಲ. ನಿರೂಪಕ ಪಾತ್ರ ಬರುವ ಎಲ್ಲ ಕಾದಂಬರಿಗಳಲ್ಲೂ ಇದಿದೆ. ಆದರೆ ಇಬ್ಬರೂ ತಂತ್ರಜ್ಞಾನ, ವಿಜ್ಞಾನ ಪ್ರಿಯರಾದರೂ ಅನೇಕ ಸಂದರ್ಭಗಳಲ್ಲಿ ತಿರುಗಿಬಿದ್ದ ಸಾಕ್ಷಿಗಳು. ಇದನ್ನು ಹೇಳದೆ ಹೋದರೆ ಅನ್ಯಾಯ ಮಾಡಿದಂತಾಗುತ್ತೆ. ಕಾರಂತರು ಕೈಗಾ ಅಣುಸ್ಥಾವರ, ದಾಂಡೇಲಿಯ ಕಾಗದದ ಕಾರ್ಖಾನೆಯನ್ನು ವಿರೋಧಿಸಿದರು; ತೇಜಸ್ವಿ ಹಾವುಗೊಲ್ಲರ ಎಂಕ್ಟನಂತಹವರ ಪಾಡಿನ ಬಗ್ಗೆ ಬರೀತಾರೆ. ಅದು ಹೊರಗೆ ನಿಂತು ಬರೆದದ್ದಲ್ಲ. ಎಂಕ್ಟ ನಮ್ಮ ಕಣ್ಣಲ್ಲಿ ಮಾತ್ರ ಎಂಕ್ಟ. ಅವನಮಟ್ಟಿಗೆ ಅವನೊಬ್ಬ 'ಸ್ವ'ವುಳ್ಳ ವ್ಯಕ್ತಿತ್ವ. ಈ ಸೂಕ್ಷ್ಮಗಳನ್ನೆಲ್ಲ ಮರೀಬಾರದು.

◆ **ನಿರಂಜನ?**

ನನ್ನ ಪ್ರಕಾರ ನಿರಂಜನರು ಅಷ್ಟು ಒಳ್ಳೆಯ ಗದ್ಯ ಬರಹಗಾರ ಅಲ್ಲ. 'ಚಿರಸ್ಮರಣೆ'ಯ ಕಥೆಯನ್ನು ನೀವು ಕರ್ನಾಟಕದಲ್ಲಿ ಎಲ್ಲಿ ಬೇಕಾದರೂ ಇಡಬಹುದು. ಅದಕ್ಕೆ ತನ್ನದೇ ಆದ ಕಾಲದೇಶಗಳ ವಿಶಿಷ್ಟತೆ ಅನ್ನೋದಿಲ್ಲ. ಪ್ರಗತಿಶೀಲ ಬರಹಗಾರ ಯಾವ ಬರವಣಿಗೆಯಲ್ಲೂ ಅದು ಕಾಣಸೋದಿಲ್ಲ. ಆ ಭಾಷೆಗೂ ಅವರು ವರ್ಣಿಸುವ ಜೀವನಕ್ಕೂ ಅವರ ನಿರೂಪಣೆಗೂ ಒಂದು ಜೈವಿಕವಾದ ಸಂಬಂಧವಿಲ್ಲ. ಅವರ ಕೃತಿಗಳನ್ನು ಅವಿರುವ ಹಾಗೇ ಒಳ್ಳೆ ಸಾಹಿತ್ಯ ಕೃತಿಗಳು ಅಂತ ಒಪ್ಪೋಕೆ ಕಷ್ಟ.

◆ **ಅನಂತಮೂರ್ತಿ ಗದ್ಯ?**

ಅನಂತಮೂರ್ತಿ ಸೊಗಸಾದ ಗದ್ಯ ಬರೀತಾರೆ. ಆದರೆ ಅವರ ಗದ್ಯದಲ್ಲಿ ಸ್ವಲ್ಪ ತೋರುಗಾಣಿಕೆ ಇದೆ. ಈ ತೋರುಗಾಣಿಕೆ ಯಶವಂತ ಚಿತ್ತಾಲರಲ್ಲಿ ಬೇಕಾದಷ್ಟಿದೆ. ಯಾಕೆ ನಮ್ಮ ಶಾಂತಿನಾಥ ದೇಸಾಯಿಯವರಲ್ಲೂ ಇದೆ. ಆದರೆ, ಪುಣೇಕರರಲ್ಲಿಲ್ಲ. 'ಗಂಗವ್ವ ಗಂಗಾಮಾಯಿ' ಎಂಥ ಗದ್ಯ! ಅವರು ತನಗನಿಸಿದ್ದನ್ನು ನೇರವಾಗಿ ಹೇಳೋರು. ಅವರು 'ಮರಳಿ ಮಣ್ಣಿಗೆ'ಯ ಬಗ್ಗೆ ಹೇಳಿದ ಮಾತು ಗೊತ್ತಾ? 'ಮೂರನೇ ತಲೆಮಾರಿನ ರಾಮ ತನ್ನ ತಾಯಿ ನಾಗವೇಣಿಯ ಜತೆ ಕಡಲ ತೀರಕ್ಕೆ ಹೋಗಿ